# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 625 (770) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್. ಎಸ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21.08.2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕಾರ್ಮಿಕರಿಗಾಗಿ ಕಾರ್ಮಿಕ ಇಲಾಖೆ ಯಲ್ಲಿ ಇರುವ ವಿವಿಧ ಯೋಜನೆಗಳು ಮತ್ತು ಅದರ ಮಾನದಂಡಗಳು ಯಾವುವು; ಕಾರ್ಮಿಕ ಕಾರ್ಡ್ ಪಡೆಯಲು ಇರುವ ಅರ್ಹತೆಗಳೇನು; (ಸಂಪೂರ್ಣ ವಿವರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಯೋಜನೆಗಳ ಮೂಲಕ ಜಾರಿಗೊಳಿಸುತ್ತಿರುವ ವಿವಿದ ಯೋಜನೆಗಳಡಿ ಅರ್ಹ ಕಾರ್ಮಿಕರನ್ನು ಫಲಾನುಭವಿಗಳನ್ನಾಗಿ ನೋಂದಾಯಿಸುತ್ತಿದ್ದು, ನೀಡಲಾಗುತ್ತಿರುವ ಸೌಲಭ್ಯಗಳ ವಿವರ ಹಾಗೂ ಅನುಸರಿಸಲಾಗುತ್ತಿರುವ ಮಾನದಂಡಗಳ ವಿವರ ಈ ಕೆಳ ಕಂಡಂತಿದೆ.<br><br>**<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:</u>**<br><br>ಈ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ ಜಾರಿ ಮಾಡಲಾಗುತ್ತಿದೆ. ಅದರ ವಿವರಗಳನ್ನು **ಅನುಬಂಧ-1 ರಲ್ಲಿ** ಒದಗಿಸಿದೆ. ಸೌಲಭ್ಯಗಳನ್ನು ಪಡೆಯಲು ಇರಬೇಕಾದ ಅರ್ಹತೆಗಳ ಮಾಹಿತಿಯನ್ನು **ಅನುಬಂಧ-2 ರಲ್ಲಿ** ಒದಗಿಸಿದೆ.<br><br>ಮಂಡಳಿಯಲ್ಲಿ ನೋಂದಾಯಿತರಾಗಲು ಈ ಕೆಳಕಂಡ ಅರ್ಹತಾ ಮಾನದಂಡಗಳು ಇರಬೇಕಿರುತ್ತದೆ.<br><br>1. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ನೋಂದಣಿಗೆ ಅರ್ಜಿ ಸಲ್ಲಿಸಿದ ಪೂರ್ವದ 12 ತಿಂಗಳಲ್ಲಿ ಕನಿಷ್ಠ 90 ದಿನಗಳ ಕಾಲ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಾಗಿ ಕೆಲಸ ನಿರ್ವಹಿಸಿರಬೇಕು. |

2. ಕಾರ್ಮಿಕರ ವಯಸ್ಸು 18 ರಿಂದ 60 ವರ್ಷದೊಳಗಿರಬೇಕು.

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**

ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ವಿವಿಧ ಯೋಜನೆಗಳಡಿ ಸೌಲಭ್ಯಗಳನ್ನು ಒದಗಿಸುತ್ತಿದ್ದು, ವಿವರ ಈ ಕೆಳಕಂಡಂತಿದೆ.

(1) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-**

ಈ ಯೋಜನೆಯಡಿ ಅಸಂಘಟಿತ ವಲಯದ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರು ಹಾಗೂ ಅಲೆಮಾರಿ ಹಾಗೂ ಅರೆ ಅಲೆಮಾರಿ ಪಂಗಡದ ಕುಲಕಸುಬಿನ ವೃತ್ತಿ ಆಧಾರಿತ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು ಸೇರಿದಂತೆ ಒಟ್ಟಾರೆ 102 ವರ್ಗಗಳ ಕಾರ್ಮಿಕರನ್ನು ಉಚಿತವಾಗಿ ನೋಂದಾಯಿಸಿ, ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದ್ದು, ಸದರಿ ನೋಂದಾಯಿತ ಕಾರ್ಮಿಕರಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ

**(ಅ) ಅಪಘಾತ ಪರಿಹಾರ ಸೌಲಭ್ಯ**

- ಮರಣ ಪ್ರಕರಣ ರೂ. 1.00 ಲಕ್ಷದವರೆಗೆ ಅಪಘಾತ ಪರಿಹಾರ ನೀಡಲಾಗುವುದು.
- ಅಪಘಾತದಿಂದುಟಾಗುವ ಸಂಪೂರ್ಣ ಶಾಶ್ವತ/ ಭಾಗಶಃ ದುರ್ಬಲತೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ) - ರೂ. 1.00 ಲಕ್ಷದವರೆಗೆ ಪರಿಹಾರ ನೀಡಲಾಗುವುದು.
- ಆಸ್ಪತ್ರೆ ವೆಚ್ಚ ಮರುಪಾವತಿ - ರೂ. 50,000/- ದವರೆಗೆ ನೀಡಲಾಗುವುದು.

**(ಆ) ಸಹಜ ಮರಣ ಪರಿಹಾರ (ಅಂತ್ಯಕ್ರಿಯೆ ಧನಸಹಾಯ)**

- ನೋಂದಾಯಿತ ಫಲಾನುಭವಿಯು ವಯೋಸಹಜ/ ಖಾಯಿಲೆ/ ಅಕಾಲಿಕ ಅಥವಾ ಇನ್ನಿತರೆ ಕಾರಣಗಳಿಂದ ಮರಣ ಹೊಂದಿದಲ್ಲಿ ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ. 10,000/-ಗಳ ಧನ ಸಹಾಯ ಸೌಲಭ್ಯ ನೀಡಲಾಗುವುದು.

**ಅರ್ಹತೆ/ಮಾನದಂಡಗಳು:**

- ಈ ಯೋಜನೆಯು ಕರ್ನಾಟಕ ರಾಜ್ಯದ ನಿವಾಸಿಗಳಿಗೆ ಮಾತ್ರ ಅನ್ವಯವಾಗುತ್ತದೆ.
- ಅರ್ಜಿದಾರರ ವಯೋಮಿತಿ 18 ರಿಂದ 60 ವರ್ಷಗಳು.
- ಮೇಲಿನ 102 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಮಾತ್ರ ಅನ್ವಯಿಸುತ್ತದೆ.
- ಆದಾಯ ತೆರಿಗೆ ಪಾವತಿದಾರರಾಗಿರಬಾರದು.
- ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು.

**2) <u>ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ:-</u>**

ಇ-ಕಾಮರ್ಸ್ ವಲಯಗಳಲ್ಲಿ ಕಾರ್ಯನಿರ್ವಹಿಸು ತ್ತಿರುವ ಸ್ವಿಗ್ಗಿ, ಜೊಮಾಟೋಗಳಂತಹ ಸಂಸ್ಥೆಗಳಲ್ಲಿ ಫುಡ್ ಡೆಲಿವರಿ ಮಾಡುವ ಹಾಗೂ ಮುಂತಾದ ಡೆಲಿವರಿ ವೃತ್ತಿಯಲ್ಲಿ ತೊಡಗಿಕೊಂಡ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರು ಸೇವಾ ಸಿಂಧು ಹಾಗೂ ಇ-ಶ್ರಮ್ ಪೋರ್ಟಲ್ಗಳ ಮೂಲಕ ನೋಂದಾಯಿಸಿಕೊಂಡು ಸ್ಮಾರ್ಟ್ ಕಾರ್ಡ್ ಪಡೆಯುವ ಮೂಲಕ ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಬಹುದಾಗಿದೆ:

**ಸೌಲಭ್ಯಗಳು:-**

**ಜೀವ ವಿಮೆ:**

ಫಲಾನುಭವಿಯ ಮರಣದ ನಂತರ ಕಾನೂನುಬದ್ಧ ವಾರಸುದಾರರಿಗೆ ರೂ.2.00 ಲಕ್ಷಗಳ ಜೀವ ವಿಮಾ ಪರಿಹಾರ ನೀಡಲಾಗುವುದು.

**ಅಪಘಾತ ವಿಮಾ ಸೌಲಭ್ಯ:**

- ಮರಣ ಪ್ರಕರಣ- ರೂ.2.00 ಲಕ್ಷಗಳ ಅಪಘಾತ ವಿಮಾ ಪರಿಹಾರ ಹಾಗೂ ರೂ.2.00 ಲಕ್ಷಗಳ ಜೀವ ವಿಮಾ ಪರಿಹಾರ ಸೇರಿ ಒಟ್ಟು ರೂ.4.00 ಲಕ್ಷಗಳ ಪರಿಹಾರ ನೀಡಲಾಗುವುದು.
- ಅಪಘಾತದಿಂದುಟಾಗುವ ಸಂಪೂರ್ಣ ಶಾಶ್ವತ/ಭಾಗಶಃ ದುರ್ಬಲತೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ)- ರೂ.2.00 ಲಕ್ಷ ಗಳವರೆಗೆ ಪರಿಹಾರ ನೀಡಲಾಗುವುದು.
- ಆಸ್ಪತ್ರೆ ವೆಚ್ಚ ಮರುಪಾವತಿ- ರೂ.1.00 ಲಕ್ಷಗಳವರೆಗೆ ನೀಡಲಾಗುವುದು.

| | | |
|---|---|---|
| | | **ಅರ್ಹತೆ/ಮಾನದಂಡಗಳು:**<br>• 18 ರಿಂದ 60 ವಯೋಮಾನದವರಾಗಿರಬೇಕು.<br>• ಆದಾಯ ತೆರಿಗೆ ಪಾವತಿದಾರರಾಗಿರಬಾರದು.<br>• ಭವಿಷ್ಯನಿಧಿ ಹಾಗೂ ಇ.ಎಸ್.ಐ ಫಲಾನುಭವಿಯಾಗಿರಬಾರದು.<br>• ಕರ್ನಾಟಕದಲ್ಲಿ ಗಿಗ್ ವೃತ್ತಿ (ಡೆಲಿವರಿ ಕಾರ್ಯ) ನಿರ್ವಹಿಸುತ್ತಿರುವವರಿಗೆ ಮಾತ್ರ.<br><br>**(3)ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ:-**<br>ಅಸಂಘಟಿತ ವಲಯದ ವ್ಯಾಪ್ತಿಯಲ್ಲಿ ಬರುವ ದಿನಪತ್ರಿಕೆ ಹಾಗೂ ಹಾಲು ವಿತರಿಸುವ ಕಾರ್ಮಿಕರು ಅರೆಕಾಲೀನ ವೃತ್ತಿ ನಿರ್ವಹಿಸುತ್ತಿದ್ದು, ಇಂತಹ ಕಾರ್ಮಿಕರಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.<br><br>**ಸೌಲಭ್ಯಗಳು:**<br>❖ ಅಪಘಾತದಿಂದ ಮರಣ ಹೊಂದಿದಲ್ಲಿ ರೂ2.00 ಲಕ್ಷಗಳ ಪರಿಹಾರ ನೀಡಲಾಗುವುದು.<br>❖ ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ ಪರಿಹಾರ ನೀಡಲಾಗುವುದು. (ಶೇಕಡವಾರು ದುರ್ಬಲತೆ ಆಧಾರದಮೇಲೆ).<br>❖ ಅಪಘಾತ ಅಥವಾ ಮಾರಣಾಂತಿಕ ಕಾಯಿಲೆ ಅಥವಾ ಗಂಭೀರ ಅನಾರೋಗ್ಯಕ್ಕೆ ತುತ್ತಾದಲ್ಲಿ ಆಸ್ಪತ್ರೆ ವೆಚ್ಚ ಮರುಪಾವತಿ ರೂ.1.00 ಲಕ್ಷಗಳವರೆಗೆ ಪರಿಹಾರ ನೀಡಲಾಗುವುದು.<br><br>**ಅರ್ಹತೆ/ಮಾನದಂಡಗಳು:**<br>• ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.<br>• 16 ರಿಂದ 70 ವಯೋಮಾನದವರಾಗಿರಬೇಕು.<br>• ಕೇಂದ್ರ ಸರ್ಕಾರದ ಇ-ಶ್ರಮ್ ಪೋರ್ಟಲ್‌ನಲ್ಲಿ "News Paper Boy" ಎಂಬ ವರ್ಗದಡಿ ನೋಂದಣಿಯಾಗಿರಬೇಕು.<br>• ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು.<br>• ಯೋಜನೆಯ ಸೌಲಭ್ಯಗಳು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಹ ಲಭ್ಯವಾಗುತ್ತವೆ |

**(4) ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಯೋಜನೆ:-**

ಅಸಂಘಟಿತ ವರ್ಗದ ಕಾರ್ಮಿಕರಲ್ಲಿ ಬಹುಸಂಖ್ಯೆಯ ಕಾರ್ಮಿಕರನ್ನು ಹೊಂದಿರುವ, ಖಾಸಗಿ ವಾಣಿಜ್ಯ ಸಾರಿಗೆ ವಾಹನಗಳಾದ ಆಟೋ, ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಲಾರಿ, ಬಸ್ ಇತ್ಯಾದಿ ವಾಹನಗಳ ಕಾರ್ಮಿಕರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ಸದರಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ, ಅವಶ್ಯಕವಿರುವ ಸಂಪನ್ಮೂಲವನ್ನು ಕ್ರೋಢೀಕರಿಸಲು ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ಅಧಿನಿಯಮ-2024 ಹಾಗೂ ನಿಯಮಾವಳಿಗಳು, 2024 ಅನ್ನು ರಚಿಸಿರುತ್ತದೆ. ಸದರಿ ಕಾಯ್ದೆಯ ಕಲಂ 3 ರನ್ವಯ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕ್ಷೇಮಾಭಿವೃದ್ಧಿ ಮಂಡಳಿಯನ್ನು ರಚಿಸಲಾಗಿದ್ದು, ಮಂಡಳಿಯ ಮೂಲಕ ಗುರುತಿಸಲಾದ 20 ವರ್ಗಗಳ ನೋಂದಾಯಿತ ಸಾರಿಗೆ ಕಾರ್ಮಿಕರಿಗೆ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

- **ದೊರಕುವ ಸೌಲಭ್ಯಗಳು:**

**(ಅ) ಅಪಘಾತ ಪರಿಹಾರ ಸೌಲಭ್ಯ:**

- ಅಪಘಾತದಿಂದ ಫಲಾನುಭವಿಗಳು ನಿಧನರಾದಲ್ಲಿ, ನಾಮನಿರ್ದೇಶಿತರಿಗೆ ರೂ.5 ಲಕ್ಷಗಳ ಪರಿಹಾರ ನೀಡಲಾಗುವುದು.
- ಅಪಘಾತದಿಂದ ಸಂಪೂರ್ಣ/ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗೆ ದುರ್ಬಲತೆಯ ಪ್ರಮಾಣಕ್ಕನುಗುಣವಾಗಿ ರೂ.2 ಲಕ್ಷಗಳ ವರೆಗೆ ಪರಿಹಾರ ನೀಡಲಾಗುವುದು.
- ಅಪಘಾತದಿಂದ ತಾತ್ಕಾಲಿಕ ದುರ್ಬಲತೆ ಹೊಂದಿದಾಗ- ಆಸ್ಪತ್ರೆ ವೆಚ್ಚ ಮರುಪಾವತಿ ರೂ. 1.00 ಲಕ್ಷದವರೆಗೆ ಪರಿಹಾರ ನೀಡಲಾಗುವುದು.

**(ಆ) ನೈಸರ್ಗಿಕ ಮರಣ ಪರಿಹಾರ ಹಾಗೂ ಅಂತ್ಯಸಂಸ್ಕಾರ ವೆಚ್ಚ:**

* ಸಹಜ ಮರಣ ಹೊಂದಿದ ಫಲಾನುಭವಿಗಳ ಅವಲಂಬಿತರಿಗೆ ಅಂತ್ಯ ಸಂಸ್ಕಾರದ ವೆಚ್ಚವೂ ಸೇರಿದಂತೆ ರೂ.25,000/-ಗಳ ಪರಿಹಾರ ನೀಡಲಾಗುವುದು.

**(ಇ) ಶೈಕ್ಷಣಿಕ ಧನಸಹಾಯ :**

**1. ನೋಂದಾಯಿತ ಫಲಾನುಭವಿಯ ಗರಿಷ್ಠ ಇಬ್ಬರು ಮಕ್ಕಳಿಗೆ:-**

* 12ನೇ ತರಗತಿ ಅಥವಾ ತತ್ಸಮಾನ - ವಾರ್ಷಿಕ ತಲಾ ರೂ.3,000/- ಗಳನ್ನು ಒದಗಿಸಲಾಗುವುದು.
* ಪದವಿ ಅಥವಾ ತತ್ಸಮಾನ - ವಾರ್ಷಿಕ ತಲಾ ರೂ.5,500/-ಗಳನ್ನು ಒದಗಿಸಲಾಗುವುದು.
* ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ - ವಾರ್ಷಿಕ ತಲಾ ರೂ.8,000/-ಗಳನ್ನು ಒದಗಿಸಲಾಗುವುದು.
* ಸ್ನಾತಕೋತ್ತರ ಪದವಿ - ವಾರ್ಷಿಕ ತಲಾ ರೂ.11,000/- ಗಳನ್ನು ಒದಗಿಸಲಾಗುವುದು.

**2. ಅಪಘಾತದಿಂದ ನಿಧನರಾದ / ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಯ ಗರಿಷ್ಠ ಇಬ್ಬರು ಮಕ್ಕಳಿಗೆ:-**

* 1ನೇ ತರಗತಿಯಿಂದ ಪದವಿ ಅಥವಾ ತತ್ಸಮಾನ - ವಾರ್ಷಿಕ ತಲಾ ರೂ.10,000/- ಗಳನ್ನು ಒದಗಿಸಲಾಗುವುದು.
* ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ - ವಾರ್ಷಿಕ ತಲಾ ರೂ.20,000/-ಗಳನ್ನು ಒದಗಿಸಲಾಗುವುದು.
* ಸ್ನಾತಕೋತ್ತರ ಪದವಿ - ವಾರ್ಷಿಕ ತಲಾ ರೂ.25,000/- ಗಳನ್ನು ಒದಗಿಸಲಾಗುವುದು.

**(ಈ) ಹೆರಿಗೆ ಸಹಾಯ ಧನ:**

* ಫಲಾನುಭವಿಯ ಮೊದಲ ಎರಡು ಹೆರಿಗೆಗಳಿಗೆ ಮಾತ್ರ ಸೀಮಿತಗೊಂಡಂತೆ ತಲಾ ರೂ.10,000/-ಗಳನ್ನು ಒದಗಿಸಲಾಗುವುದು.
* ಮಂಡಳಿಗೆ ಅನ್ವಯಿಸುವುದಿಲ್ಲ.

**<u>ಅರ್ಹತೆ/ಮಾನದಂಡಗಳು:</u>**

* ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
* ವಯೋಮಿತಿ 18 ರಿಂದ 70 ವರ್ಷಗಳು.
* ಆದಾಯ ತೆರಿಗೆ ಪಾವತಿದಾರರಾಗಿರಬಾರದು.

* ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು.
* ಯೋಜನೆಯ ಸೌಲಭ್ಯಗಳು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಹ ಲಭ್ಯವಾಗುತ್ತವೆ.

ಚಾಲಕರು ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯಿಂದ ವಾಣಿಜ್ಯ ವಾಹನ ಚಲಾಯಿಸಲು ಊರ್ಜಿತ ಚಾಲನಾ ಪರವಾನಗಿಯನ್ನು ಹೊಂದಿರುವುದು ಕಡ್ಡಾಯ.

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:**

ಈ ಮಂಡಳಿಗೆ ಸಂಘಟಿತ ವಲಯದ ಕಾರ್ಮಿಕರು ಕೆಲಸ ನಿರ್ವಹಿಸುವ ಸಂಸ್ಥೆಯೇ ಕಾರ್ಮಿಕರ ಮತ್ತು ಮಾಲೀಕರ ವಂತಿಕೆಯನ್ನು ಮಂಡಳಿಗೆ ಆನ್ ಲೈನ್ ಮೂಲಕ ಪಾವತಿ ಸಲಾಗುತ್ತದೆ. ಕಾರ್ಮಿಕರು ಮಂಡಳಿಯಲ್ಲಿ ನೋಂದಾಯಿಸಿ ಕಾರ್ಡ್ ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವಿವಿಧ ಕಲ್ಯಾಣ ಯೋಜನೆಗಳಡಿ ಸೌಲಭ್ಯ ಪಡೆಯಲು ಇರುವ ಮಾನದಂಡಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ಯೋಜನೆಯ ವಿವರ | ಮಾನದಂಡಗಳ ವಿವರ |
|---|---|---|
| 1 | ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನಸಹಾಯ | • ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ. 50 ಹಾಗೂ ಪ.ಜಾ/ಪ.ಪಂಗಡದ ವಿದ್ಯಾರ್ಥಿಗಳು ಶೇ.45 ರಷ್ಟು ಅಂಕ ಪಡೆದು ತೇರ್ಗಡೆಯಾಗಿರ ಬೇಕು.<br>• ಒಂದು ಕುಟುಂಬದಲ್ಲಿ ಇಬ್ಬರೂ ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು.<br>• ಮಂಡಳಿಗೆ ವಂತಿಗೆ ಪಾವತಿಸುವ ಕಾರ್ಮಿಕರ ಮಾಸಿಕ ವೇತನ ರೂ. 35,000/- ಗಳ ಒಳಗಿರಬೇಕು. |
| 2 | ಕಾರ್ಮಿಕರಿಗೆ ವೈದ್ಯ ಕೀಯ ನೆರವು | • ಅರ್ಜಿದಾರರು ಅರ್ಜಿಯನ್ನು ಚಿಕಿತ್ಸೆ ಪಡೆದ 06 ತಿಂಗಳ ಅವಧಿಯೊಳಗೆ |

| | | | | |
|---|---|---|---|---|
| | | | | ಮಂಡಳಿಗೆ ಸಲ್ಲಿಸತಕ್ಕದ್ದು.<br>• ವಯೋಮಿತಿ 18-60 ವರ್ಷ |
| | | 3 | ಕಾರ್ಮಿಕರಿಗೆ ಅಪಘಾತ ಧನಸಹಾಯ | • ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ಅಪಘಾತವಾದಲ್ಲಿ ಧನಸಹಾಯ ನೀಡಲಾಗುವುದು.<br>• ಸೌಲಭ್ಯಪಡೆಯುವ ಕಾರ್ಮಿಕರು ಅಪಘಾತವಾದ 03 ತಿಂಗಳೊಳಗೆ ಅರ್ಜಿಯನ್ನು ಮಂಡಳಿಗೆ ಸಲ್ಲಿಸ ತಕ್ಕದ್ದು.<br>• ವಯೋಮಿತಿ 18-60 ವರ್ಷ |
| | | 4 | ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ | • ಮಹಿಳಾ ಕಾರ್ಮಿಕರಿಗೆ ಮೊದಲ 2 ಮಕ್ಕಳಿಗೆ ಮಾತ್ರ ಹೆರಿಗೆ ಭತ್ಯೆ ಸೌಲಭ್ಯವನ್ನು ನೀಡಲಾಗುವುದು.<br>• ಮಗು ಜನಿಸಿದ 06 ತಿಂಗಳೊಳಗೆ ಅರ್ಜಿಯನ್ನು ಮಂಡಳಿಗೆ ಸಲ್ಲಿಸ ತಕ್ಕದ್ದು.<br>• ವಯೋಮಿತಿ 18-60 ವರ್ಷ |
| | | 5 | ಮೃತ ಕಾರ್ಮಿಕನ ಅಂತ್ಯಸಂಸ್ಕಾರಕ್ಕೆ ಧನಸಹಾಯ | • ಮೃತರ ಕುಟುಂಬದ ಅವಲಂಬಿತರು ಕಾರ್ಮಿಕ ಮೃತಪಟ್ಟ 06 ತಿಂಗಳೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸೂಕ್ತ ದಾಖಲೆ ಗಳೊಂದಿಗೆ ಮಂಡಳಿಗೆ ಅರ್ಜಿ ಸಲ್ಲಿಸ ತಕ್ಕದ್ದು.<br>• ವಯೋಮಿತಿ 18-60 ವರ್ಷ |
| | | 6 | ವಾರ್ಷಿಕ ವೈದ್ಯಕೀಯ ತಪಾ ಸಣೆ ಶಿಬಿರ ಹಮ್ಮಿ ಕೊಳ್ಳುವ ಟ್ರೇಡ್ಯೂನಿಯನ್/ ಸಂಸ್ಥೆಗಳಿಗೆ ಧನಸಹಾಯ | • ನೋಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿ ಯೊಂದಿಗೆ ಹಮ್ಮಿಕೊಳ್ಳುವ ವಾರ್ಷಿಕ ಆರೋಗ್ಯ ತಪಾಸಣೆ ಶಿಬಿರಕ್ಕೆ ಧನಸಹಾಯ ನೀಡ ಲಾವುದು. |
| | | 7 | ವಾರ್ಷಿಕ ಕ್ರೀಡಾ ಕೂಟ ಹಮ್ಮಿ ಕೊಳ್ಳುವ ನೊಂದಾ ಯಿತ ಕಾರ್ಮಿಕ | • ನೋಂದಾಯಿತ ಕಾರ್ಮಿಕ ಸಂಘ ಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿ ಯೊಂದಿಗೆ ವಾರ್ಷಿಕ ಕ್ರೀಡಾ ಕೂಟ ಹಮ್ಮಿ |

| | | |
|---|---|---|
| | | ಸಂಘಗಳಿಗೆ ಧನ ಸಹಾಯ \| ಕೊಂಡಲ್ಲಿ ಧನ ಸಹಾಯ ನೀಡಲಾಗುವುದು. |
| (ಆ) | ಅಸಂಘಟಿತ ವಲಯದ ಕಾರ್ಮಿಕ ರಾದ ಕಟ್ಟಡ ಕಾರ್ಮಿಕರು, ಬೀದಿಬದಿ ವ್ಯಾಪಾರಸ್ಥರು ಮತ್ತು ಗೃಹ ಕಾರ್ಮಿ ಕರ ಕಲ್ಯಾಣಕ್ಕಾಗಿ ಸರ್ಕಾರ ರೂಪಿಸಿ ರುವ ಯೋಜನೆಗಳು ಯಾವುವು; ಮತ್ತು ಇದರ ಅನುಷ್ಠಾನ ಸಮರ್ಪಕವಾಗಿ ಆಗುತ್ತಿದೆಯೇ; ಸದರಿ ಕಾರ್ಮಿಕರಿಗೆ ಪ್ರಸ್ತುತ ಕನಿಷ್ಠ ವೇತನ ಪರಿಷ್ಕರಣೆ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಸರ್ಕಾರದ ಮುಂದಿನ ಕ್ರಮಗಳನ್ನು ತಿಳಿಸುವುದು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅಸಂಘಟಿತ ವಲಯದ ಕಾರ್ಮಿಕರಾದ ಬೀದಿಬದಿ ವ್ಯಾಪಾರಸ್ಥರು ಮತ್ತು ಗೃಹ ಕಾರ್ಮಿಕರಿಗಾಗಿ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ:<br><br>**1. <u>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-</u>**<br>ಈ ಯೋಜನೆಯಡಿ ಅಸಂಘಟಿತ ವಲಯದ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರು, ಬೀದಿಬದಿ ವ್ಯಾಪಾರಸ್ಥರು ಮತ್ತು ಗೃಹ ಕಾರ್ಮಿಕರು ಸೇರಿದಂತೆ ಒಟ್ಟಾರೆ 102 ವರ್ಗಗಳ ಕಾರ್ಮಿಕರನ್ನು ಉಚಿತವಾಗಿ ನೋಂದಾಯಿಸಿ, ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದ್ದು, ಸದರಿ ನೋಂದಾಯಿತ ಕಾರ್ಮಿಕರಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br><br>**(ಅ) ಅಪಘಾತ ಪರಿಹಾರ ಸೌಲಭ್ಯ**<br>❖ ಮರಣ ಪ್ರಕರಣ ರೂ. 1.00 ಲಕ್ಷದವರೆಗೆ ಅಪಘಾತ ಪರಿಹಾರ ನೀಡಲಾಗುವುದು.<br>❖ ಅಪಘಾತದಿಂದುಟಾಗುವ ಸಂಪೂರ್ಣ ಶಾಶ್ವತ/ ಭಾಗಶಃ ದುರ್ಬಲತೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ)ರೂ.1.00 ಲಕ್ಷದವರೆಗೆ ಪರಿಹಾರ ನೀಡಲಾಗುವುದು.<br>❖ ಆಸ್ಪತ್ರೆ ವೆಚ್ಚ ಮರುಪಾವತಿ ರೂ.50,000/- ದವರೆಗೆ ನೀಡಲಾಗುವುದು.<br><br>**(ಆ) ಸಹಜ ಮರಣ ಪರಿಹಾರ (ಅಂತ್ಯಕ್ರಿಯೆ ಧನಸಹಾಯ)**<br>❖ ನೋಂದಾಯಿತ ಫಲಾನುಭವಿಯು ವಯೋಸಹಜ/ ಖಾಯಿಲೆ/ ಅಕಾಲಿಕ ಅಥವಾ ಇನ್ನಿತರೆ ಕಾರಣಗಳಿಂದ ಮರಣ ಹೊಂದಿದಲ್ಲಿ ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ. 10,000/-ಗಳ ಧನ ಸಹಾಯ ಸೌಲಭ್ಯ ನೀಡಲಾಗುವುದು. |

| | | |
|---|---|---|
| (ಇ) | ರಾಜ್ಯದಲ್ಲಿ ಪ್ರಸ್ತುತ ಗಿಗ್ ಕಾರ್ಮಿಕ ರಾದ ಜೊಮ್ಯಾಟೋ, ಸ್ವಿಗ್ಗಿ, ಓಲಾ, ಉಬರ್ ಮುಂತಾದ ಆನ್‌ಲೈನ್ ಆಪ್ ಆಧಾರಿತ ಡೆಲಿವರಿ ಬಾಯ್ಸ್ ಮತ್ತು ಚಾಲಕರ ಸಂಖ್ಯೆ ಎಷ್ಟಿದೆ; (ಪ್ರತ್ಯೇಕ ಮಾಹಿತಿ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ನೀತಿ ಆಯೋಗ 2022ರ ವರದಿಯನ್ವಯ ಕರ್ನಾಟಕ ರಾಜ್ಯದಲ್ಲಿ ಸುಮಾರು 2.3 ಲಕ್ಷದಷ್ಟು ಗಿಗ್ ಕಾರ್ಮಿಕರು ಇರುವುದಾಗಿ ಅಂದಾಜಿಸಲಾಗಿರುತ್ತದೆ.<br><br>ಗಿಗ್ ಕಾರ್ಮಿಕರ ಹಿತರಕ್ಷಣೆಗಾಗಿ 2023ನೇ ಸಾಲಿನಲ್ಲಿ ಜಾರಿಗೆ ತರಲಾದ "ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ"ಯನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಜಾರಿಗೊಳಿಸಲಾಗಿದ್ದು, ಸದರಿ ಯೋಜನೆಯಡಿ ಈವರೆಗೆ 30,256 ಗಿಗ್ ಕಾರ್ಮಿಕರು ನೋಂದಣಿಯಾಗಿರುತ್ತಾರೆ. |
| (ಈ) | ಗಿಗ್ ಕಾರ್ಮಿಕರ (Gig Workers) ಹಿತರಕ್ಷಣೆಗಾಗಿ ಸರ್ಕಾರ ಯಾವುದಾದರೂ ಯೋಜನೆಗಳನ್ನು ಹಾಕಿ ಕೊಂಡಿದೆಯೇ; ಇತ್ತೀಚಿನ ದಿನಗಳಲ್ಲಿ ಲಕ್ಷಾಂತರ ಯುವಕರು ಈ ವಲಯ ದಲ್ಲಿ ಉದ್ಯೋಗವನ್ನು ಕಂಡುಕೊಂಡಿದ್ದು ಇವರ ಭದ್ರತೆ ಕನಿಷ್ಠ ವೇತನ 'ಆರೋಗ್ಯ ವಿಮೆ' ಮತ್ತು ಇನ್ನಿತರ ಸವಲತ್ತುಗಳನ್ನು ಒದಗಿಸುವುದಕ್ಕಾಗಿ ಸರ್ಕಾರ ಪ್ರತ್ಯೇಕ ಕಾಯ್ದೆ ತರುವುದೇ ಅತ್ಯಾವಶ್ಯಕವಾಗಿರುವುದು ಸರ್ಕಾ ರದ ಗಮನಕ್ಕೆ ಬಂದಿದೆಯೇ; ಬಂದಿ ದ್ದಲ್ಲಿ, ಸರ್ಕಾರದ ಮುಂದಿನ ಕ್ರಮಗ ಳನ್ನು ತಿಳಿಸುವುದು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಡಿ ಗಿಗ್ ಕಾರ್ಮಿಕರ ಹಿತರಕ್ಷಣೆಗಾಗಿ ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು ವಿವರ ಈ ಕೆಳಗಿನಂತಿದೆ.<br><br>**<u>ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ:-</u>**<br><br>ಇ-ಕಾಮರ್ಸ್ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಿಗ್ಗಿ, ಜೊಮಾಟೋಗಳಂತಹ ಸಂಸ್ಥೆಗಳಲ್ಲಿ ಫುಡ್‌ಡೆಲಿವರಿ ಮಾಡುವ ಹಾಗೂ ಮುಂತಾದ ಡೆಲಿವರಿ ವೃತ್ತಿಯಲ್ಲಿ ತೊಡಗಿಕೊಂಡ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರು ಸೇವಾ ಸಿಂಧು ಹಾಗೂ ಇ-ಶ್ರಮ್ ಪೋರ್ಟಲ್ಲ್ಗಳ ಮೂಲಕ ನೋಂದಾಯಿಸಿಕೊಂಡು ಸ್ಮಾರ್ಟ್ ಕಾರ್ಡ್ ಪಡೆಯುವ ಮೂಲಕ ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಬಹುದಾಗಿದೆ:<br>**ಸೌಲಭ್ಯಗಳು:-**<br><br>**ಜೀವ ವಿಮೆ:**<br>ಫಲಾನುಭವಿಯ ಮರಣದ ನಂತರ ಕಾನೂನುಬದ್ಧ ವಾರಸುದಾರರಿಗೆ ರೂ.2.00 ಲಕ್ಷಗಳ ಜೀವ ವಿಮಾ ಪರಿಹಾರ ನೀಡಲಾಗುವುದು.<br><br>**ಅಪಘಾತ ವಿಮಾ ಸೌಲಭ್ಯ:** |

| | | |
|---|---|---|
| | | ❖ ಮರಣ ಪ್ರಕರಣ- ರೂ.2.00 ಲಕ್ಷಗಳ ಅಪಘಾತ ವಿಮಾ ಪರಿಹಾರ ಹಾಗೂ ರೂ.2.00 ಲಕ್ಷಗಳ ಜೀವ ವಿಮಾ ಪರಿಹಾರ ಸೇರಿ ಒಟ್ಟು ರೂ.4.00 ಲಕ್ಷಗಳ ಪರಿಹಾರ ನೀಡಲಾಗುವುದು.<br>❖ ಅಪಘಾತದಿಂದುಟಾಗುವ ಸಂಪೂರ್ಣ ಶಾಶ್ವತ/ಭಾಗಶಃ ದುರ್ಬಲತೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ)- ರೂ.2.00 ಲಕ್ಷ ಗಳವರೆಗೆ ಪರಿಹಾರ ನೀಡಲಾಗುವುದು.<br>❖ ಆಸ್ಪತ್ರೆ ವೆಚ್ಚ ಮರುಪಾವತಿ- ರೂ.1.00 ಲಕ್ಷಗಳವರೆಗೆ ನೀಡಲಾಗುವುದು.<br><br>ಮುಂದುವರೆದು, ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಸಂಪನ್ಮೂಲ ಕ್ರೋಢೀಕರಿಸಲು Karnataka Platform based Gig Workers (Social Security and Welfare) Act, 2025 ಅನ್ನು **ದಿನಾಂಕ: 12-09-2025** ರಂದು ಸರ್ಕಾರವು ಅಧಿಸೂಚಿಸಿರುತ್ತದೆ ಮತ್ತು ಇದಕ್ಕನುಗುಣವಾಗಿ ನಿಯಮಾವಳಿಯನ್ನು **ದಿನಾಂಕ: 19-11-2025** ರಂದು ಅಧಿಸೂಚಿಸಲಾಗಿ ಮಂಡಳಿಯನ್ನು ರಚಿಸಲಾಗಿರುತ್ತದೆ. |
| (ಉ) | ರಾಜ್ಯದ ಮಹಿಳಾ ಕಾರ್ಮಿಕರಿಗಾಗಿ ಇರುವ ಯೋಜನೆಗಳು ಮತ್ತು ಮಾನ ದಂಡಗಳು ಯಾವುವು: ಕಳೆದ ಮೂರು ವರ್ಷದಲ್ಲಿ ಸದರಿ ಯೋಜನೆಗಳ ಅಡಿ ಯಲ್ಲಿ ಸವಲತ್ತು ಪಡೆದ ಮಹಿಳಾ ಕಾರ್ಮಿಕರು ಎಷ್ಟು? (ಜಿಲ್ಲಾವಾರು ಮತ್ತು ಯೋಜನೆವಾರು ಮಾಹಿತಿ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಫಲಾನುಭವಿಗಳಾಗಿ ನೋಂದಾಯಿತರಾದ ಕಾರ್ಮಿಕರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತಿದೆ.<br><br>**<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:</u>**<br>ಮಂಡಳಿಯಲ್ಲಿ ರೂಪಿಸಲಾಗಿರುವ ಯೋಜನೆಗಳಿಗೆ ಯಾವುದೇ ಲಿಂಗ ಬೇಧವಿರುವುದಿಲ್ಲ. ಮಹಿಳಾ ಕಾರ್ಮಿಕರು ಸೇರಿದಂತೆ ಎಲ್ಲಾ ಕಟ್ಟಡ ಮತ್ತು ಇತರ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸಗಳನ್ನು ನಿರ್ವಹಿಸುವ ಕಾರ್ಮಿಕರನ್ನು ನೋಂದಾಯಿಸಿ ಸೌಲಭ್ಯಗಳನ್ನು ವಿತರಿಸಲಾಗುತ್ತದೆ. ಇಂತಹ ಕಾರ್ಮಿಕರಿಗಾಗಿ ರೂಪಿಸಿರುವ ಯೋಜನೆಗಳು ಮತ್ತು ಅದರ ಮಾನದಂಡಗಳನ್ನು **ಉಪ ಪ್ರಶ್ನೆ 'ಅ' ರಲ್ಲಿಯೇ** ಒದಗಿಸಿದೆ.<br><br>ಕಳೆದ 3 ವರ್ಷಗಳಲ್ಲಿ ಮೇಲಿನ ಯೋಜನೆಗಳ ಪೈಕಿ ಸಹಾಯಧನ ನೀಡಲಾಗುವ ಸೌಲಭ್ಯಗಳಡಿ ಒಟ್ಟು 2.32 ಲಕ್ಷ ಮಹಿಳಾ ಕಾರ್ಮಿಕರು ಸೌಲಭ್ಯವನ್ನು ಪಡೆದಿರುತ್ತಾರೆ. |

| | | |
|---|---|---|
| | | ಇದರ ಯೋಜನಾವಾರು ಮಾಹಿತಿ ಮಾತ್ರ ಇದ್ದು, ಅದರ ವಿವರಗಳನ್ನು **ಅನುಬಂಧ-3 ರಲ್ಲಿ** ಒದಗಿಸಿದೆ.<br><br>**<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u>**<br>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಮಂಡಳಿಯಲ್ಲಿ ಮಹಿಳಾ ಕಾರ್ಮಿಕರಿಗಾಗಿ ಯಾವುದೇ ಪ್ರತ್ಯೇಕ ಯೋಜನೆಯನ್ನು ಜಾರಿಗೊಳಿಸುತ್ತಿರುವುದಿಲ್ಲ.<br><br>ಆದರೆ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಡಿ ಜಾರಿಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಡಿ ಕಳೆದ ಮೂರು ವರ್ಷದಲ್ಲಿ ಒಟ್ಟು 5 ಮಹಿಳಾ ಕಾರ್ಮಿಕರು ಯೋಜನೆಯ ಪ್ರಯೋಜನ ಪಡೆದಿದ್ದು, ಜಿಲ್ಲಾವಾರು ವಿವರವನ್ನು **ಅನುಬಂಧ-4 ರಲ್ಲಿ** ಒದಗಿಸಿದೆ.<br><br>**<u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:</u>**<br><br>ಈ ಮಂಡಳಿಗೆ ಸಂಘಟಿತ ಕಾರ್ಮಿಕರಿಂದರೂ 50/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕ ರಿಂದರೂ 100/- ರಂತೆ ಹಾಗೂ ಸರ್ಕಾರದಿಂದ ಪ್ರತಿ ಕಾರ್ಮಿಕ ರಿಂದರೂ 50/- ರಂತೆ ವಂತಿಗೆಯಾಗಿ ಪಾವತಿಸಲಾಗುತ್ತಿದೆ. ಆ ವಂತಿಗೆಯ ಮೊತ್ತವನ್ನು ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ಕಲ್ಯಾಣ ಯೋಜನೆಗಳಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br><br>1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನಸಹಾಯ<br>2) ಕಾರ್ಮಿಕರಿಗೆ ವೈದ್ಯಕೀಯ ನೆರವು<br>3) ಕಾರ್ಮಿಕರಿಗೆ ಅಪಘಾತ ಧನಸಹಾಯ<br>4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ<br>5) ಮೃತ ಕಾರ್ಮಿಕನ ಅಂತ್ಯಸಂಸ್ಕಾರಕ್ಕೆ ಧನಸಹಾಯ<br>6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರಹಮ್ಮಿಕೊಳ್ಳುವ ಟ್ರೇಡ್ಯೂನಿಯನ್/ ಸಂಸ್ಥೆಗಳಿಗೆ ಧನಸಹಾಯ<br>7) ವಾರ್ಷಿಕ ಕ್ರೀಡಾಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ<br><br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವಿವಿಧ ಕಲ್ಯಾಣ ಯೋಜನೆಗಳಡಿ ಸೌಲಭ್ಯ ಪಡೆಯಲು ಇರುವ ಮಾನದಂಡಗಳ ವಿವರಗಳು ಈ ಕೆಳಕಂಡಂತಿದೆ. |

| ಕ್ರ. ಸಂ | ಯೋಜನೆಯ ವಿವರ | ಮಾನದಂಡಗಳ ವಿವರ |
|---|---|---|
| 1 | ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನಸಹಾಯ | • ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ. 50 ಹಾಗೂ ಪ.ಜಾ / ಪ.ಪಂಗಡದ ವಿದ್ಯಾರ್ಥಿಗಳು ಶೇ.45 ರಷ್ಟು ಅಂಕ ಪಡೆದು ತೇರ್ಗಡೆ ಯಾಗಿರಬೇಕು.<br>• ಒಂದು ಕುಟುಂಬದಲ್ಲಿ ಇಬ್ಬರೂ ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು.<br>• ಮಂಡಳಿಗೆ ವಂತಿಗೆ ಪಾವತಿ ಸುವ ಕಾರ್ಮಿಕರ ಮಾಸಿಕ ವೇತನ ರೂ. 35,000/- ಗಳ ಒಳಗಿರಬೇಕು. |
| 2 | ಕಾರ್ಮಿಕರಿಗೆ ವೈದ್ಯಕೀಯ ನೆರವು | • ಅರ್ಜಿದಾರರು ಅರ್ಜಿಯನ್ನು ಚಿಕಿತ್ಸೆ ಪಡೆದ 06 ತಿಂಗಳ ಅವಧಿಯೊಳಗೆ ಮಂಡಳಿಗೆ ಸಲ್ಲಿಸತಕ್ಕದ್ದು.<br>• ವಯೋಮಿತಿ 18-60 ವರ್ಷ |
| 3 | ಕಾರ್ಮಿಕರಿಗೆ ಅಪಘಾತ ಧನಸಹಾಯ | • ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ಅಪಘಾತವಾದಲ್ಲಿ ಧನಸಹಾಯ ನೀಡಲಾಗು ವುದು.<br>• ಸೌಲಭ್ಯ ಪಡೆಯುವ ಕಾರ್ಮಿ ಕರು ಅಪಘಾತವಾದ 03 ತಿಂಗಳೊಳಗೆ ಅರ್ಜಿಯನ್ನು ಮಂಡಳಿಗೆ ಸಲ್ಲಿಸತಕ್ಕದ್ದು.<br>• ವಯೋಮಿತಿ 18-60 ವರ್ಷ |
| 4 | ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ | • ಮಹಿಳಾ ಕಾರ್ಮಿಕರಿಗೆ ಮೊದಲ 2 ಮಕ್ಕಳಿಗೆ ಮಾತ್ರ ಹೆರಿಗೆ ಭತ್ಯೆ ಸೌಲಭ್ಯವನ್ನು ನೀಡಲಾಗು ವುದು.<br>• ಮಗು ಜನಿಸಿದ 06 ತಿಂಗಳೊಳಗೆ ಅರ್ಜಿಯನ್ನು ಮಂಡಳಿಗೆ ಸಲ್ಲಿಸ ತಕ್ಕದ್ದು. |

| | | |
|---|---|---|
| | | • ವಯೋಮಿತಿ 18-60 ವರ್ಷ |
| 5 | ಮೃತ ಕಾರ್ಮಿಕನ ಅಂತ್ಯಸಂಸ್ಕಾರಕ್ಕೆ ಧನಸಹಾಯ | • ಮೃತರ ಕುಟುಂಬದ ಅವಲಂಬಿತರು ಕಾರ್ಮಿಕ ಮೃತ ಪಟ್ಟ 06 ತಿಂಗಳೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಮಂಡಳಿಗೆ ಅರ್ಜಿ ಸಲ್ಲಿಸತಕ್ಕದ್ದು.<br>• ವಯೋಮಿತಿ 18-60 ವರ್ಷ |
| 6 | ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ಯೂನಿಯನ್/ ಸಂಸ್ಥೆಗಳಿಗೆ ಧನಸಹಾಯ | • ನೋಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿ ಯೊಂದಿಗೆ ಹಮ್ಮಿಕೊಳ್ಳುವ ವಾರ್ಷಿಕ ಆರೋಗ್ಯ ತಪಾಸಣೆ ಶಿಬಿರಕ್ಕೆ ಧನಸಹಾಯ ನೀಡ ಲಾಗುವುದು |
| 7 | ವಾರ್ಷಿಕ ಕ್ರೀಡಾಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ | • ನೋಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿ ಯೊಂದಿಗೆ ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಂಡಲ್ಲಿ ಧನ ಸಹಾಯ ನೀಡಲಾಗುವುದು. |

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿವಿಧ ಕಲ್ಯಾಣ ಯೋಜನೆಗಳಡಿ ನೀಡಿರುವ ಸೌಲಭ್ಯಗಳ ವಿವರಗಳು **ಅನುಬಂಧ-5 ರಲ್ಲಿ** ಒದಗಿಸಿದೆ.

**ಕಾಇ 461 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ-1

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 770 (625) ಕ್ಕೆ**

**<u>ಮಂಡಳಿಯ ವತಿಯಿಂದ ಫಲಾನುಭವಿಗಳು ಮತ್ತು ಅವಲಂಬಿತರಿಗೆ ನೀಡುತ್ತಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವಿವರ</u>**

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.3,000/-
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ/ಪತ್ನಿಗೆ ಮಾಸಿಕ **ರೂ.1500/-**
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ /ಭಾಗಶಃ ಅಂಗ ವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ. 2,00,000/-** ದವರೆಗೆ ಅನುಗ್ರಹರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ (ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ).
5. **ಟ್ರೈನಿಂಗ್-ಕಮ್-ಟೂಲ್‌ಕಿಟ್ಸ್ ಸೌಲಭ್ಯ (ಶ್ರಮ ಸಾಮರ್ಥ್ಯ): ರೂ. 20,000/- ವರೆಗೆ.**
6. **ವಸತಿ ಸೌಲಭ್ಯ (ಕಾರ್ಮಿಕ ಗೃಹಭಾಗ್ಯ): ರೂ.2,00,000/-** ದವರೆಗೆ ಮುಂಗಡ ಸೌಲಭ್ಯ.
7. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ.50,000/-.
8. **ಅಂತ್ಯಕ್ರಿಯೆ ವೆಚ್ಚ: ರೂ. 4,000/-** ಹಾಗೂ ಅನುಗ್ರಹ ರಾಶಿ **ರೂ.1,46,000/-** ಸಹಾಯಧನ.
9. **<u>ಶೈಕ್ಷಣಿಕ ಸಹಾಯಧನ</u>**

| ಕ್ರ. ಸಂ | ಕೋರ್ಸ್/ತರಗತಿ | ತರಗತಿ/ಪದವಿ (ಪ್ರತಿ ವರ್ಷಕ್ಕೆ) (ರೂ.ಗಳಲ್ಲಿ) | ಸ್ನಾತಕೋತ್ತರ ಪದವಿ (ಪ್ರತಿ ವರ್ಷಕ್ಕೆ) (ರೂ.ಗಳಲ್ಲಿ) |
|---|---|---|---|
| 1 | 1ನೇ ತರಗತಿಯಿಂದ 5ನೇ ತರಗತಿ | 1,800/- | - |
| 2 | 6ನೇ ತರಗತಿಯಿಂದ 8ನೇ ತರಗತಿ | 2,400/- | - |
| 3 | 9 ಮತ್ತು 10ನೇ ತರಗತಿ | 3,000/- | - |
| 4 | ಪಿಯುಸಿ, 11 ಹಾಗೂ 12ನೇ ತರಗತಿ ಅಥವಾ ತತ್ಸಮಾನ ಕೋರ್ಸ್. | 6,000/- | - |
| 5 | 10ನೇ ತರಗತಿ ನಂತರದ ಐಟಿಐ/ ತತ್ಸಮಾನ ತಾಂತ್ರಿಕ ಕೋರ್ಸ್‌ಗಳು | 10,000/- | - |
| 6 | ಪಿಯುಸಿ ನಂತರದ ಯಾವುದೇ ಡಿಪ್ಲೋಮ ತರಗತಿ. | 12,000/- | - |
| 7 | ಸಾಮಾನ್ಯ ಪದವಿ (ಜನರಲ್ ಡಿಗ್ರಿ) - ಬಿಎ, ಬಿಕಾಂ, ಬಿಎಸ್ಸಿ ಮುಂತಾದವುಗಳು | 15,000/- | 20,000/- |
| 8 | 03 ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ Vocational ವೃತ್ತಿಪರ ಕೋರ್ಸ್‌ಗಳು ಕಾನೂನು ಪದವಿ ಸಹಿತ (Professional Courses) | 20,000/- | 25,000/- |
| 9 | 03 ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ತಾಂತ್ರಿಕ ವೃತ್ತಿಪರ ಕೋರ್ಸ್‌ಗಳು (Professional Courses) | 25,000/- | 35,000/- |
| 10 | 03 ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಅರೆ ವೈದ್ಯಕೀಯ ವೃತ್ತಿಪರ ಕೋರ್ಸ್‌ಗಳು (Para Medical Courses) | 20,000/- | 25,000/- |
| 11 | 03 ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ವೈದ್ಯಕೀಯ ವೃತ್ತಿಪರ ಕೋರ್ಸ್‌ಗಳು (Professional Courses) | 25,000/- | 35,000/- |
| 12 | ರಾಷ್ಟ್ರೀಯ ಕಾನೂನು ಶಾಲೆಗಳಿಗೆ ಸಮನಾದ ಕಾನೂನು ವಿದ್ಯಾ ಸಂಸ್ಥೆಗಳು | 40,000/- | 50,000/- |
| 13 | ಪಿಹೆಚ್‌ಡಿ/ಎಮ್‌ಫಿಲ್ (03 ವರ್ಷ ಅವಧಿಯವರೆಗೆ) | 40,000/- | - |
| 14 | IIT, IIIT, AIMS, IISc, IISERC ನಂತಹ ಪ್ರತಿಷ್ಠಿತ ರಾಷ್ಟ್ರೀಯ ವಿದ್ಯಾಸಂಸ್ಥೆಗಳು. | 50,000/- | 60,000/- |

10. **ವೈದ್ಯಕೀಯ ಸಹಾಯ ಧನ (ಕಾರ್ಮಿಕ ಆರೋಗ್ಯ ಭಾಗ್ಯ)**: ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ. 300/- ರಿಂದ ರೂ. 20,000/- ವರೆಗೆ.**
11. **ಅಪಘಾತ ಪರಿಹಾರ:** ನೊಂದಾಯಿತ ಕಟ್ಟಡ ಕಾರ್ಮಿಕರು ಕೆಲಸದ ಸ್ಥಳದಲ್ಲಿ **ಮರಣ** ಹೊಂದಿದ್ದಲ್ಲಿ **ರೂ.8,00,000/- ಹಾಗೂ** ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ. 2,00,000/-.**
12. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ)**: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರಪಿಂಡದಲ್ಲಿನ ಕಲ್ಲುತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ , ಕಿಡ್ನಿಶಸ್ತ್ರ ಚಿಕಿತ್ಸೆ, ಇ.ಎನ್.ಟಿ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆಮುರಿತ/ ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-ವರೆಗೆ.**
13. **ಮದುವೆ ಸಹಾಯ ಧನ (ಗೃಹ ಲಕ್ಷ್ಮೀ ಬಾಂಡ್)**: ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ **ತಲಾ ರೂ. 60,000/-.**
14. **ತಾಯಿ ಮಗು ಸಹಾಯ ಹಸ್ತ**: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ **ರೂ. 6,000/- ಗಳ** ಸಹಾಯಧನ.
15. **ಸುರಕ್ಷತಾ ಕಿಟ್**: ನೋಂದಾಯಿತ ಕಾರ್ಮಿಕರ ವೃತ್ತಿಗನುಗುಣವಾಗಿ ಸುರಕ್ಷತಾ ಕಿಟ್‌ಗಳ ವಿತರಣೆ
16. **ಸಂಚಾರಿ ಆರೋಗ್ಯ ಕ್ಲಿನಿಕ್ ಯೋಜನೆ:** ರಾಜ್ಯಾದ್ಯಂತ 100 ವಾಹನಗಳ ಮುಖಾಂತರ ನೋಂದಾಯಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಆರೋಗ್ಯ ತಪಾಸಣೆ ಮಾಡುವ ಮೂಲಕ ಅವಶ್ಯಕ ಔಷಧೋಪಚಾರಗಳ ವಿತರಣೆ ಮಾಡಲಾಗುತ್ತಿದೆ.
17. **ಪ್ರೀವೆಂಟಿವ್ ಹೆಲ್ತ್ ಕೇರ್ ಯೋಜನೆ:** ನೋಂದಾಯಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಆರೋಗ್ಯದ ಮುನ್ನೆಚ್ಚರಿಗಾಗಿ ನಿಗಧಿತ 23 ರೀತಿಯ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಿ ವೈದ್ಯಕೀಯ ವರದಿಗಳ ವಿತರಣೆ.
18. **ಆರ್.ಪಿ.ಎಲ್. ತರಬೇತಿ ಮತ್ತು ಟೂಲ್ ಕಿಟ್ ವಿತರಣೆ:** ನೋಂದಾಯಿತ ಕಾರ್ಮಿಕರ ವೃತ್ತಿಗನುಗುಣವಾಗಿ ಆರ್.ಪಿ.ಎಲ್. ತರಬೇತಿಯನ್ನು ನೀಡಿ ವೃತ್ತಿಗನುಗುಣವಾಗಿ ಟೂಲ್ ಕಿಟ್‌ಗಳನ್ನು ವಿತರಿಸಲಾಗುತ್ತಿದೆ.
19. **ತಾತ್ಕಾಲಿಕ ವಸತಿ ಸಮುಚ್ಚಯ:** ವಲಸೆ ಕಾರ್ಮಿಕರಿಗೆ ಅವಶ್ಯಕ ವಸತಿ ಸೌಲಭ್ಯ ಕಲ್ಪಿಸಲು 07 ಜಿಲ್ಲೆಯ 10 ಸ್ಥಳಗಳಲ್ಲಿ ತಾತ್ಕಾಲಿಕ ವಸತಿ ಸಮುಚ್ಚಯಗಳನ್ನು ನಿರ್ಮಾಣ ಮಾಡಿ ಆ ಮೂಲಕ ವಲಸೆ ಕಾರ್ಮಿಕರಿಗೆ ತಾತ್ಕಾಲಿಕ ವಸತಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.
20. **ಶ್ರಮಿಕ ವಸತಿ ಶಾಲೆಗಳು:** ಮಂಡಳಿಯ ನೋಂದಾಯಿತ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ರಾಜ್ಯಾದ್ಯಂತ 104 ಶ್ರಮಿಕ ವಸತಿ ಶಾಲೆಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತಿದೆ.

## ಅನುಬಂಧ-2

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 770 (625) ಕ್ಕೆ**

**ಮಂಡಳಿಯ ಸೌಲಭ್ಯಗಳನ್ನು ಪಡೆಯಲು ನೋಂದಾಯಿತ ಕಾರ್ಮಿಕರು ಹೊಂದಿರಬೇಕಾದ ಅರ್ಹತೆಗಳ ವಿವರ**

| ಕ್ರ. ಸಂ | ಯೋಜನೆಯ ಹೆಸರು | ಅರ್ಹತೆಗಳು |
|---|---|---|
| 1 | ಪಿಂಚಣಿ ಸೌಲಭ್ಯ | ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ |
| 2 | ಕುಟುಂಬ ಪಿಂಚಣಿ ಸೌಲಭ್ಯ | ಮೃತ ಪಿಂಚಣಿದಾರರ ಪತಿ/ಪತ್ನಿಯಾಗಿರಬೇಕು |
| 3 | ದುರ್ಬಲತೆ ಪಿಂಚಣಿ | ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ /ಭಾಗಶಃ ಅಂಗ ವಿಕಲತೆ ಹೊಂದಿದ್ದವರಾಗಿರಬೇಕು |
| 4 | ಮದುವೆ ಸಹಾಯ ಧನ | 1. ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳು ಮದುವೆಯಾಗಿರಬೇಕು<br>2. ಅರ್ಜಿ ಸಲ್ಲಿಸುವ ಸಮಯಕ್ಕೆ ಫಲಾನುಭವಿಯ ಸದಸ್ಯತ್ವ ಚಾಲ್ತಿಯಲ್ಲಿರಬೇಕು |
| 5 | ತಾಯಿ ಮಗು ಸಹಾಯ ಹಸ್ತ | 1. ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ<br>2. ಅರ್ಜಿ ಸಲ್ಲಿಸುವ ಸಮಯಕ್ಕೆ ಫಲಾನುಭವಿಯ ಸದಸ್ಯತ್ವ ಚಾಲ್ತಿಯಲ್ಲಿರಬೇಕು |
| 7 | ಹೆರಿಗೆ ಸೌಲಭ್ಯ | 1. ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ<br>2. ಅರ್ಜಿ ಸಲ್ಲಿಸುವ ಸಮಯಕ್ಕೆ ಫಲಾನುಭವಿಯ ಸದಸ್ಯತ್ವ ಚಾಲ್ತಿಯಲ್ಲಿರಬೇಕು |
| 8 | ಅಂತ್ಯಕ್ರಿಯೆ ವೆಚ್ಚ | 1. ನೋಂದಾಯಿತ ಫಲಾನುಭವಿಯು ಮೃತಪಟ್ಟಲ್ಲಿ<br>2. ಫಲಾನುಭವಿಯು ಮರಣ ಹೊಂದುವ ಸಮಯಕ್ಕೆ ಸದಸ್ಯತ್ವ ಚಾಲ್ತಿಯಲ್ಲಿರಬೇಕು |
| 9 | ಶೈಕ್ಷಣಿಕ ಸಹಾಯಧನ | 1. ನೋಂದಾಯಿತ ಫಲಾನುಭವಿಯ ಇಬ್ಬರು ಮಕ್ಕಳು ವ್ಯಾಸಂಗ ಮಾಡುತ್ತಿದ್ದಲ್ಲಿ<br>2. ಅರ್ಜಿ ಸಲ್ಲಿಸುವ ಸಮಯಕ್ಕೆ ಫಲಾನುಭವಿಯ ಸದಸ್ಯತ್ವ ಚಾಲ್ತಿಯಲ್ಲಿರಬೇಕು |
| 10 | ವೈದ್ಯಕೀಯ ಸಹಾಯ ಧನ (ಕಾರ್ಮಿಕ ಆರೋಗ್ಯ ಭಾಗ್ಯ) | 1. ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರು ಒಳರೋಗಿಯಾಗಿ ಚಿಕಿತ್ಸೆ ಪಡೆಯಬೇಕಿರುತ್ತದೆ.<br>2. ಅರ್ಜಿ ಸಲ್ಲಿಸುವ ಸಮಯಕ್ಕೆ ಫಲಾನುಭವಿಯ ಸದಸ್ಯತ್ವ ಚಾಲ್ತಿಯಲ್ಲಿರಬೇಕು |
| 11 | ಅಪಘಾತ ಪರಿಹಾರ | 1. ನೋಂದಾಯಿತ ಕಟ್ಟಡ ಕಾರ್ಮಿಕರು ಕೆಲಸದ ಸ್ಥಳದಲ್ಲಿ ಮರಣ ಹೊಂದಿದ್ದಲ್ಲಿ ಅಥವಾ ಅಪಘಾತದಿಂದ ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ<br>2. ಫಲಾನುಭವಿಯು ಮರಣ ಹೊಂದುವ ಸಮಯಕ್ಕೆ ಸದಸ್ಯತ್ವ ಚಾಲ್ತಿಯಲ್ಲಿರಬೇಕು |
| 12 | ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ) | 1. ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರು ಪ್ರಮುಖ ಕಾಯಿಲೆಗಳಿಗೆ ಒಳಗಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಲ್ಲಿ.<br>2. ಅರ್ಜಿ ಸಲ್ಲಿಸುವ ಸಮಯಕ್ಕೆ ಫಲಾನುಭವಿಯ ಸದಸ್ಯತ್ವ ಚಾಲ್ತಿಯಲ್ಲಿರಬೇಕು |

## ಅನುಬಂಧ -3

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 770 (625) ಕ್ಕೆ**

**ಕಳೆದ 3 ವರ್ಷಗಳಲ್ಲಿ ವಿವಿಧ ಸಹಾಯಧನ ಸೌಲಭ್ಯಗಳಡಿ ಸೌಲಭ್ಯ ಪಡೆದ ಮಹಿಳಾ ಕಾರ್ಮಿಕರ ಯೋಜನಾವಾರು ವಿವರ**

| ಕ್ರ. ಸಂ. | ಸೌಲಭ್ಯದ ವಿವರ | ಮಹಿಳಾ ಕಾರ್ಮಿಕರ ಸಂಖ್ಯೆ |
|---|---|---|
| 1 | Accident Assistance | 40 |
| 2 | Assistance For Major Ailments | 801 |
| 3 | Continuation of Disability Pension | 17 |
| 4 | Continuation of Pension | 2,345 |
| 5 | Delivery Assistance | 3,894 |
| 6 | Disability Pension | 11 |
| 7 | Funeral Expense and Ex-gratia | 1,428 |
| 8 | Marriage Assistance | 13,935 |
| 9 | Medical Assistance | 126 |
| 10 | Pension Scheme | 1,224 |
| 11 | Thayi Magu Sahaya Hasta | 1,849 |
| 12 | Education Assistance | 2,06,739 |
| | **Total** | **2,32,409** |

# ಅನುಬಂಧ-4

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 770 (625) ಕ್ಕೆ**

| ಜಿಲ್ಲೆ | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ. | | | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ . | | | ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ | | | ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ. | | | ಇ-ಶ್ರಮ್ ಕಾರ್ಯಕ್ರಮದಡಿ ಅಸಂಘಟಿತ ಕಾರ್ಮಿಕರ ನೋಂದಣಿ. | | |
|---|---|---|---|---|---|---|---|---|---|---|---|---|---|---|---|
| | 2023-24 | 2024-25 | 2025-26 | 2023-24 | 2024-25 | 2025-26 | 2023-24 | 2024-25 | 2025-26 | 2023-24 | 2024-25 | 2025-26 | 2023-24 | 2024-25 | 2025-26 |
| ಬೆಂಗಳೂರು | - | | 1 | - | - | - | - | - | 1 | - | - | - | - | | - |
| ಬಳ್ಳಾರಿ | - | 1 | 1 | | - | - | - | - | - | - | - | - | - | | - |
| ಧಾರವಾಡ | - | | 1 | - | - | - | - | - | - | - | - | - | - | | - |

# ಅನುಬಂಧ -5

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 770 (625)**

**2023-24ನೇ ಸಾಲಿನಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿವಿಧ ಕಲ್ಯಾಣ ಯೋಜನೆಗಳಡಿ ಮಹಿಳಾ ಕಾರ್ಮಿಕರಿಗೆ ನೀಡಿರುವ ವಿವಿಧ ಸೌಲಭ್ಯಗಳ ವಿವರಗಳು**

| ಕ್ರ. ಸಂ. | ಜಿಲ್ಲೆಗಳ ಹೆಸರು | ಶೈಕ್ಷಣಿಕ ಪ್ರೋತ್ಸಾಹ ಧನ | | ಅಂತ್ಯ ಸಂಸ್ಕಾರ | | ಹೆರಿಗೆ ಭತ್ಯೆ | | ವೈದ್ಯಕೀಯ ನೆರವು | | ಅಪಘಾತ ಧನ ಸಹಾಯ | | ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ | | ವಾರ್ಷಿಕ ಕ್ರೀಡಾಕೂಟ | |
|---|---|---|---|---|---|---|---|---|---|---|---|---|---|---|---|
| | | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ |
| 1 | ಬಾಗಲಕೋಟೆ | 82 | 672000 | 11 | 110000 | 0 | 0 | 0 | 0 | 0 | 0 | 0 | 0 | 0 | 0 |
| 2 | ಬೆಂಗಳೂರು ಗ್ರಾಮಾಂತರ | 440 | 3894000 | 13 | 130000 | 27 | 270000 | 0 | 0 | 0 | 0 | 0 | 0 | 0 | 0 |
| 3 | ಬೆಂಗಳೂರು ನಗರ | 4414 | 41704000 | 59 | 590000 | 380 | 3800000 | 2 | 35000 | 0 | 0 | 200 | 65574 | 206 | 57222 |
| 4 | ಬೆಳಗಾವಿ | 462 | 4250000 | 25 | 250000 | 3 | 30000 | 0 | 0 | 0 | 0 | 0 | 0 | 0 | 0 |
| 5 | ಬಳ್ಳಾರಿ | 4 | 58000 | 3 | 30000 | 0 | 0 | 0 | 0 | 0 | 0 | 0 | 0 | 0 | 0 |
| 6 | ಬೀದರ | 2 | 28000 | 11 | 110000 | 0 | 0 | 0 | 0 | 0 | 0 | 0 | 0 | 0 | 0 |
| 7 | ಚಾಮರಾಜನಗರ | 57 | 484000 | 5 | 50000 | 0 | 0 | 0 | 0 | 0 | 0 | 0 | 0 | 0 | 0 |
| 8 | ಚಿಕ್ಕಬಳ್ಳಾಪುರ | 269 | 2162000 | 6 | 60000 | 3 | 30000 | 0 | 0 | 0 | 0 | 0 | 0 | 0 | 0 |
| 9 | ಚಿಕ್ಕಮಗಳೂರು | 49 | 390000 | 4 | 40000 | 0 | 0 | 0 | 0 | 0 | 0 | 0 | 0 | 0 | 0 |
| 10 | ಚಿತ್ರದುರ್ಗಾ | 54 | 406000 | 2 | 20000 | 1 | 10000 | 0 | 0 | 0 | 0 | 0 | 0 | 0 | 0 |
| 11 | ದಕ್ಷಿಣ ಕನ್ನಡ | 1170 | 11764000 | 13 | 130000 | 28 | 280000 | 0 | 0 | 0 | 0 | 0 | 0 | 0 | 0 |
| 12 | ದಾವಣಗೆರೆ | 112 | 1172000 | 5 | 50000 | 3 | 30000 | 0 | 0 | 0 | 0 | 0 | 0 | 0 | 0 |
| 13 | ಧಾರವಾಡ | 154 | 1518000 | 11 | 110000 | 8 | 80000 | 0 | 0 | 0 | 0 | 0 | 0 | 0 | 0 |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 14 | ಗದಗ | 20 | 230000 | 8 | 80000 | 0 | 0 | 0 | 0 | 0 | 0 | 0 | 0 | 0 | 0 |
| 15 | ಹಾಸನ | 468 | 3764000 | 25 | 250000 | 38 | 380000 | 0 | 0 | 0 | 0 | 0 | 0 | 0 | 0 |
| 16 | ಹಾವೇರಿ | 72 | 554000 | 11 | 110000 | 4 | 40000 | 0 | 0 | 0 | 0 | 0 | 0 | 0 | 0 |
| 17 | ಕಲಬುರ್ಗಿ | 4 | 52000 | 13 | 130000 | 0 | 0 | 0 | 0 | 0 | 0 | 0 | 0 | 0 | 0 |
| 18 | ಕೊಡಗು | 25 | 196000 | 4 | 40000 | 1 | 10000 | 0 | 0 | 0 | 0 | 0 | 0 | 0 | 0 |
| 19 | ಕೋಲಾರ | 212 | 1674000 | 9 | 90000 | 25 | 250000 | 0 | 0 | 0 | 0 | 0 | 0 | 0 | 0 |
| 20 | ಕೊಪ್ಪಳ | 4 | 32000 | 1 | 10000 | 0 | 0 | 0 | 0 | 0 | 0 | 0 | 0 | 0 | 0 |
| 21 | ಮಂಡ್ಯ | 1140 | 9704000 | 17 | 170000 | 31 | 310000 | 0 | 0 | 0 | 0 | 0 | 0 | 0 | 0 |
| 22 | ಮೈಸೂರು | 1278 | 11188000 | 11 | 110000 | 19 | 190000 | 0 | 0 | 0 | 0 | 80 | 39801 | 0 | 0 |
| 23 | ರಾಯಚೂರು | 3 | 24000 | 10 | 100000 | 3 | 30000 | 0 | 0 | 0 | 0 | 0 | 0 | 0 | 0 |
| 24 | ರಾಮನಗರ | 540 | 4552000 | 12 | 120000 | 8 | 80000 | 0 | 0 | 0 | 0 | 0 | 0 | 0 | 0 |
| 25 | ಶಿವಮೊಗ್ಗ | 644 | 5404000 | 10 | 100000 | 14 | 140000 | 0 | 0 | 0 | 0 | [illegible] | 44224 | 468 | 98734 |
| 26 | ತುಮಕೂರು | 1017 | 8872000 | 20 | 200000 | 40 | 400000 | 0 | 0 | 0 | 0 | 0 | 0 | 0 | 0 |
| 27 | ಉಡುಪಿ | 2335 | 19314000 | 7 | 70000 | 27 | 270000 | 0 | 0 | 0 | 0 | 0 | 0 | 0 | 0 |
| 28 | ಉತ್ತರ ಕನ್ನಡ | 68 | 654000 | 3 | 30000 | 0 | 0 | 0 | 0 | 0 | 0 | 0 | 0 | 0 | 0 |
| 29 | ವಿಜಯನಗರ | 0 | 0 | 5 | 50000 | 0 | 0 | 0 | 0 | 0 | 0 | 0 | 0 | 0 | 0 |
| 30 | ವಿಜಯಪುರ | 23 | 258000 | 19 | 190000 | 0 | 0 | 0 | 0 | 0 | 0 | 0 | 0 | 0 | 0 |
| 31 | ಯಾದಗಿರಿ | 0 | 0 | 1 | 10000 | 0 | 0 | 0 | 0 | 0 | 0 | 0 | 0 | 0 | 0 |
| | ಒಟ್ಟು ಮೊತ್ತ | 15122 | 134984000 | 354 | 3540000 | 663 | 6630000 | 2 | 35000 | 0 | 0 | 391 | 149599 | 674 | 155956 |

## 2024-25ನೇ ಸಾಲಿನಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿವಿಧ ಕಲ್ಯಾಣ ಯೋಜನೆಗಳಡಿ ಮಹಿಳಾ ಕಾರ್ಮಿಕರಿಗೆ ನೀಡಿರುವ ವಿವಿಧ ಸೌಲಭ್ಯಗಳ ವಿವರಗಳು

| | | ಶೈಕ್ಷಣಿಕ ಪ್ರೋತ್ಸಾಹ ಧನ | | ಅಂತ್ಯ ಸಂಸ್ಕಾರ | | ಹೆರಿಗೆ ಭತ್ಯೆ | | ವೈದ್ಯಕೀಯ ನೆರವು | | ಅಪಘಾತ ಧನ ಸಹಾಯ | | ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ | | ವಾರ್ಷಿಕ ಕ್ರೀಡಾಕೂಟ | |
|---|---|---|---|---|---|---|---|---|---|---|---|---|---|---|---|
| ಕ್ರ. ಸಂ. | ಜಿಲ್ಲೆಗಳ ಹೆಸರು | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ |
| 1 | ಬಾಗಲಕೋಟೆ | 116 | 990000 | 14 | 140000 | 1 | 10000 | 0 | 0 | 0 | 0 | 0 | 0 | 0 | 0 |
| 2 | ಬೆಂಗಳೂರು ಗ್ರಾಮಾಂತರ | 564 | 4962000 | 18 | 180000 | 36 | 360000 | 0 | 0 | 0 | 0 | 0 | 0 | 0 | 0 |
| 3 | ಬೆಂಗಳೂರು ನಗರ | 4514 | 43308000 | 67 | 670000 | 417 | 4170000 | 3 | 45239 | 0 | 0 | 9 | 8182 | 0 | 0 |
| 4 | ಬೆಳಗಾವಿ | 548 | 5028000 | 28 | 280000 | 1 | 10000 | 0 | 0 | 0 | 0 | 0 | 0 | 0 | 0 |
| 5 | ಬಳ್ಳಾರಿ | 0 | 0 | 6 | 60000 | 1 | 10000 | 0 | 0 | 0 | 0 | 0 | 0 | 0 | 0 |
| 6 | ಬೀದರ | 6 | 84000 | 16 | 160000 | 0 | 0 | 0 | 0 | 0 | 0 | 0 | 0 | 0 | 0 |
| 7 | ಚಾಮರಾಜನಗರ | 54 | 484000 | 4 | 40000 | 0 | 0 | 0 | 0 | 0 | 0 | 0 | 0 | 0 | 0 |
| 8 | ಚಿಕ್ಕಬಳ್ಳಾಪುರ | 324 | 2662000 | 6 | 60000 | 7 | 70000 | 0 | 0 | 0 | 0 | 0 | 0 | 0 | 0 |
| 9 | ಚಿಕ್ಕಮಗಳೂರು | 54 | 462000 | 3 | 30000 | 6 | 60000 | 0 | 0 | 0 | 0 | 0 | 0 | 0 | 0 |
| 10 | ಚಿತ್ರದುರ್ಗಾ | 47 | 370000 | 5 | 50000 | 1 | 10000 | 0 | 0 | 0 | 0 | 0 | 0 | 0 | 0 |
| 11 | ದಕ್ಷಿಣ ಕನ್ನಡ | 1214 | 12488000 | 15 | 150000 | 74 | 740000 | 0 | 0 | 0 | 0 | 0 | 0 | 0 | 0 |
| 12 | ದಾವಣಗೆರೆ | 85 | 952000 | 7 | 70000 | 3 | 30000 | 0 | 0 | 0 | 0 | 0 | 0 | 0 | 0 |
| 13 | ಧಾರವಾಡ | 178 | 1670000 | 12 | 120000 | 7 | 70000 | 0 | 0 | 0 | 0 | 0 | 0 | 0 | 0 |
| 14 | ಗದಗ | 17 | 204000 | 6 | 60000 | 0 | 0 | 0 | 0 | 0 | 0 | 0 | 0 | 0 | 0 |
| 15 | ಹಾಸನ | 493 | 4192000 | 11 | 110000 | 32 | 320000 | 0 | 0 | 0 | 0 | 0 | 0 | 0 | 0 |
| 16 | ಹಾವೇರಿ | 107 | 852000 | 3 | 30000 | 3 | 30000 | 0 | 0 | 0 | 0 | 0 | 0 | 0 | 0 |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 17 | ಕಲಬುರ್ಗಿ | 6 | 80000 | 1 | 10000 | 0 | 0 | 0 | 0 | 0 | 0 | 0 | 0 | 0 | 0 |
| 18 | ಕೊಡಗು | 11 | 144000 | 4 | 40000 | 0 | 0 | 0 | 0 | 0 | 0 | 0 | 0 | 0 | 0 |
| 19 | ಕೋಲಾರ | 257 | 2084000 | 17 | 170000 | 19 | 190000 | 0 | 0 | 0 | 0 | 0 | 0 | 0 | 0 |
| 20 | ಕೊಪ್ಪಳ | 4 | 28000 | 4 | 40000 | 0 | 0 | 0 | 0 | 0 | 0 | 0 | 0 | 0 | 0 |
| 21 | ಮಂಡ್ಯ | 1249 | 10782000 | 16 | 160000 | 25 | 250000 | 0 | 0 | 0 | 0 | 0 | 0 | 0 | 0 |
| 22 | ಮೈಸೂರು | 1533 | 13610000 | 22 | 220000 | 19 | 190000 | 0 | 0 | 0 | 0 | 0 | 0 | 0 | 0 |
| 23 | ರಾಯಚೂರು | 1 | 6000 | 8 | 80000 | 1 | 10000 | 0 | 0 | 0 | 0 | 0 | 0 | 0 | 0 |
| 24 | ರಾಮನಗರ | 531 | 4536000 | 13 | 130000 | 9 | 90000 | 0 | 0 | 0 | 0 | 0 | 0 | 0 | 0 |
| 25 | ಶಿವಮೊಗ್ಗ | 700 | 5840000 | 10 | 100000 | 22 | 220000 | 0 | 0 | 0 | 0 | 131 | 48699 | 0 | 0 |
| 26 | ತುಮಕೂರು | 1171 | 10040000 | 17 | 170000 | 20 | 200000 | 0 | 0 | 0 | 0 | 0 | 0 | 0 | 0 |
| 27 | ಉಡುಪಿ | 2215 | 18626000 | 7 | 70000 | 41 | 410000 | 0 | 0 | 0 | 0 | 0 | 0 | 0 | 0 |
| 28 | ಉತ್ತರ ಕನ್ನಡ | 64 | 608000 | 6 | 60000 | 0 | 0 | 0 | 0 | 0 | 0 | 0 | 0 | 0 | 0 |
| 29 | ವಿಜಯನಗರ | 4 | 54000 | 7 | 70000 | 0 | 0 | 0 | 0 | 0 | 0 | 0 | 0 | 0 | 0 |
| 30 | ವಿಜಯಪುರ | 31 | 352000 | 20 | 200000 | 0 | 0 | 0 | 0 | 0 | 0 | 0 | 0 | 0 | 0 |
| 31 | ಯಾದಗಿರಿ | 0 | 0 | 2 | 20000 | 0 | 0 | 0 | 0 | 0 | 0 | 0 | 0 | 0 | 0 |
| | ಒಟ್ಟು ಮೊತ್ತ | 16098 | 145898000 | 375 | 3750000 | 745 | 7450000 | 3 | 45239 | 0 | 0 | 140 | 56881 | 0 | 0 |

## 2025-26ನೇ ಸಾಲಿನಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿವಿಧ ಕಲ್ಯಾಣ ಯೋಜನೆಗಳಡಿ ಮಹಿಳಾ ಕಾರ್ಮಿಕರಿಗೆ ನೀಡಿರುವ ವಿವಿಧ ಸೌಲಭ್ಯಗಳ ವಿವರಗಳು

| | | ಶೈಕ್ಷಣಿಕ ಪ್ರೋತ್ಸಾಹ ಧನ | | ಅಂತ್ಯ ಸಂಸ್ಕಾರ | | ಹೆರಿಗೆ ಭತ್ಯೆ | | ವೈದ್ಯಕೀಯ ನೆರವು | | ಅಪಘಾತ ಧನ ಸಹಾಯ | | ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ | | ವಾರ್ಷಿಕ ಕ್ರೀಡಾಕೂಟ | |
|---|---|---|---|---|---|---|---|---|---|---|---|---|---|---|---|
| ಕ್ರ. ಸಂ | ಜಿಲ್ಲೆಗಳ ಹೆಸರು | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ | ಮಹಿಳಾ ಫಲಾನುಭವಿಗಳು ಸಂಖ್ಯೆ | ಧನ ಸಹಾಯ ಮೊತ್ತ |
| 1 | ಬಾಗಲಕೋಟೆ | 221 | 2300000 | 9 | 180000 | 0 | 0 | 0 | 0 | 0 | 0 | 0 | 0 | 0 | 0 |
| 2 | ಬೆಂಗಳೂರು ಗ್ರಾಮಾಂತರ | 1432 | 13064000 | 7 | 130000 | 48 | 480000 | 0 | 0 | 0 | 0 | 0 | 0 | 0 | 0 |
| 3 | ಬೆಂಗಳೂರು ನಗರ | 7068 | 63620000 | 136 | 2460000 | 423 | 4230000 | 0 | 0 | 0 | 0 | 135 | 68878 | 38 | 10161 |
| 4 | ಬೆಳಗಾವಿ | 1055 | 9566000 | 50 | 950000 | 2 | 20000 | 0 | 0 | 0 | 0 | 0 | 0 | 0 | 0 |
| 5 | ಬಳ್ಳಾರಿ | 2 | 30000 | 4 | 70000 | 0 | 0 | 0 | 0 | 0 | 0 | 0 | 0 | 0 | 0 |
| 6 | ಬೀದರ | 16 | 194000 | 14 | 250000 | 0 | 0 | 0 | 0 | 0 | 0 | 0 | 0 | 0 | 0 |
| 7 | ಚಾಮರಾಜನಗರ | 9 | 66000 | 5 | 100000 | 0 | 0 | 0 | 0 | 0 | 0 | 0 | 0 | 0 | 0 |
| 8 | ಚಿಕ್ಕಬಳ್ಳಾಪುರ | 448 | 4108000 | 0 | 0 | 7 | 70000 | 0 | 0 | 0 | 0 | 0 | 0 | 0 | 0 |
| 9 | ಚಿಕ್ಕಮಗಳೂರು | 18 | 210000 | 0 | 0 | 1 | 10000 | 0 | 0 | 0 | 0 | 0 | 0 | 0 | 0 |
| 10 | ಚಿತ್ರದುರ್ಗಾ | 211 | 1742000 | 6 | 120000 | 0 | 0 | 0 | 0 | 0 | 0 | 0 | 0 | 0 | 0 |
| 11 | ದಕ್ಷಿಣ ಕನ್ನಡ | 1202 | 11072000 | 10 | 180000 | 96 | 960000 | 1 | 25000 | 0 | 0 | 0 | 0 | 0 | 0 |
| 12 | ದಾವಣಗೆರೆ | 71 | 678000 | 7 | 110000 | 1 | 10000 | 0 | 0 | 0 | 0 | 0 | 0 | 0 | 0 |
| 13 | ಧಾರವಾಡ | 396 | 3562000 | 15 | 280000 | 15 | 150000 | 0 | 0 | 0 | 0 | 0 | 0 | 0 | 0 |
| 14 | ಗದಗ | 11 | 100000 | 8 | 120000 | 0 | 0 | 0 | 0 | 0 | 0 | 0 | 0 | 0 | 0 |
| 15 | ಹಾಸನ | 1382 | 11754000 | 10 | 190000 | 20 | 200000 | 0 | 0 | 0 | 0 | 0 | 0 | 0 | 0 |
| 16 | ಹಾವೇರಿ | 269 | 2098000 | 8 | 160000 | 2 | 20000 | 0 | 0 | 0 | 0 | 0 | 0 | 0 | 0 |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 17 | ಕಲಬುರ್ಗಿ | 8 | 94000 | 9 | 180000 | 0 | 0 | 0 | 0 | 0 | 0 | 0 | 0 | 0 | 0 |
| 18 | ಕೊಡಗು | 14 | 152000 | 4 | 70000 | 0 | 0 | 0 | 0 | 0 | 0 | 0 | 0 | 0 | 0 |
| 19 | ಕೋಲಾರ | 472 | 4060000 | 12 | 230000 | 24 | 240000 | 0 | 0 | 0 | 0 | 0 | 0 | 0 | 0 |
| 20 | ಕೊಪ್ಪಳ | 2 | 30000 | 1 | 20000 | 1 | 10000 | 0 | 0 | 0 | 0 | 0 | 0 | 0 | 0 |
| 21 | ಮಂಡ್ಯ | 1982 | 17230000 | 10 | 180000 | 31 | 310000 | 3 | 75000 | 0 | 0 | 0 | 0 | 0 | 0 |
| 22 | ಮೈಸೂರು | 2047 | 18068000 | 25 | 430000 | 26 | 260000 | 0 | 0 | 0 | 0 | 0 | 0 | 0 | 0 |
| 23 | ರಾಯಚೂರು | 0 | 0 | 8 | 140000 | 0 | 0 | 0 | 0 | 0 | 0 | 0 | 0 | 0 | 0 |
| 24 | ರಾಮನಗರ | 1001 | 8352000 | 8 | 160000 | 15 | 150000 | 0 | 0 | 0 | 0 | 0 | 0 | 0 | 0 |
| 25 | ಶಿವಮೊಗ್ಗ | 1162 | 9940000 | 4 | 80000 | 13 | 130000 | 0 | 0 | 0 | 0 | 0 | 0 | 0 | 0 |
| 26 | ತುಮಕೂರು | 1351 | 11624000 | 8 | 130000 | 21 | 210000 | 0 | 0 | 0 | 0 | 0 | 0 | 0 | 0 |
| 27 | ಉಡುಪಿ | 3028 | 26940000 | 10 | 190000 | 56 | 560000 | 0 | 0 | 0 | 0 | 0 | 0 | 0 | 0 |
| 28 | ಉತ್ತರ ಕನ್ನಡ | 95 | 834000 | 1 | 10000 | 0 | 0 | 0 | 0 | 0 | 0 | 0 | 0 | 0 | 0 |
| 29 | ವಿಜಯನಗರ | 1 | 70000 | 2 | 30000 | 0 | 0 | 0 | 0 | 0 | 0 | 0 | 0 | 0 | 0 |
| 30 | ವಿಜಯಪುರ | 45 | [illegible] | 16 | 290000 | 2 | 20000 | 0 | 0 | 0 | 0 | 0 | 0 | 0 | 0 |
| 31 | ಯಾದಗಿರಿ | 0 | 0 | 1 | 20000 | 2 | 20000 | 0 | 0 | 0 | 0 | 0 | 0 | 0 | 0 |
| | **ಒಟ್ಟು ಮೊತ್ತ** | **25019** | **221964000** | **408** | **7460000** | **806** | **8060000** | **4** | **100000** | 0 | 0 | **135** | **68878** | **38** | **10161** |